
ಸಿನಿಮಾ ಪ್ರದರ್ಶನವನ್ನು ಕೆನಡಾದಲ್ಲಿ ಕನ್ನಡ ಸಂಘದವರು ಏರ್ಪಡಿಸಿದ್ದರು. ಟೈಟಲ್ ಕಾರ್ಡ್ಸ್ ನೋಡೋವಾಗ ಮೂರುನಾಲ್ಕು ಸಹ ನಿರ್ದೇಶಕರ ಹೆಸರುಗಳ ನಡುವೆ ಅವನ ಹೆಸರು ಕಂಡಾಗ ಮೈಯೆಲ್ಲಾ ಕಂಪನ. ಇಂಟರ್‌ನೆಟ್‌ನಲ್ಲಿ ಕನ್ನಡ ಪತ್ರಿಕೆಗಳನ್ನು ಓದುವಾಗ ಸಿನಿಮಾ ಪುಟಗಳಲ್ಲಿ ಅವನ ಹೆಸರು ಕಾಣೋದು. ಅವನಾದರೂ ಚೆನ್ನಾಗಿ ಬದುಕಲಿ ದೇವರೇ ಅಂದ್ಕೋತಿದ್ದೆ. ನಮ್ಮ ಜಗಳ ದೊಂಬಿಯಲ್ಲಿ ಅವನನ್ನು ಮರೆತೂ ಬಿಟ್ಟಿದ್ದೆ. ವಿಚ್ಛೇದನಗೊಂಡು ಬೆಂಗಳೂರು ಸೇರಿದ ಮೇಲೂ ನೋಡಬೇಕೆನಿಸಿರಲಿಲ್ಲ. ಮೋಸ ಮಾಡಿದೆನೆಂಬ 'ಗಿಲ್ಟ್' ನನ್ನಲ್ಲಿತ್ತು. ಈವತ್ತು ಅಚಾನಕ್ ಕಂಡಿದ್ದ. ಅವನಂತೂ ಬದಲಾಗಿರಲಿಲ್ಲ. ಅದೇ ಹಳೇ ಪ್ರೇಮಿಯಂತೆ ಕಂಡು ನನ್ನಲ್ಲಾಗಲೇ ಕಮರಿಹೋಗಿದ್ದ ಆಸೆಗಳನ್ನು ಚಿಗುರಿಸಿದ್ದ. 'ಅವನಿನ್ನೂ ಬ್ಯಾಚುಲರ್ರಾ?' ತಿಳಿದುಕೊಳ್ಳಬೇಕಿತ್ತು. ಕಾಫಿ ಲೋಟ ಬದಿಗಿಟ್ಟು ಪ್ರಶ್ನಿಸಿದೆ. 'ಈಗೇನ್ ಮಾಡ್ತಿದ್ದಿಯೋ?' 'ನಾನೇ ಒಂದು ಪಿಕ್ಚರ್ ಡೈರೆಕ್ಟ್ ಮಾಡಿದ್ದೀನಿ. ಲೋ ಬಜೆಟ್ ಫಿಲಂ ಕಣೆ. ಕತೆ ಸಾಹಿತ್ಯ ಎಲ್ಲಾ ನಂದೆ' ಅಂದನಾದರೂ ಅವನ ಮೋರೆಯಲ್ಲಿ ಹೆಮ್ಮೆ ಕಾಣಲಿಲ್ಲ. 'ವೆರಿಗುಡ್. ರಿಲೀಸ್ ಯಾವಾಗ್ಲೋ?' ನನಗೋ ಹೆಮ್ಮೆ ಎನಿಸಿ ಕೇಳಿದೆ.

'ನಮ್ಮಂಥವರ ಸಿನಿಮಾಗಳಿಗೆ ಅವಾರ್ಡ್ ಬಂದ್ರೇನೇ ರೆಕಗ್ನಿಶನ್ ಕಣೆ. ಪನೋರಮಾಕ್ಕೆ ಕಳಿಸಬೇಕಂತಿದೀನಿ. ಸೆನ್ಸಾರ್‌ನವರು ತುಂಬಾ ಮೆಚ್ಚಿಕೊಂಡಿದ್ದಾರೆ ಕಣೆ' ವಟವಟ ಅಂದ.

'ರಿಲೀಸ್ ಮಾಡಿಬಿಡೋ. ಆಮೇಲೆ ಅವಾರ್ಡ್‌ಗೂ ಟ್ರೈ ಮಾಡೋವಂತೆ' ಸಜೆಶನ್ ಕೊಟ್ಟೆ. ನನಗೋ ನೋಡುವ ಆತುರ.

'ನಮ್ಮಂಥೋರ ಸಿನಿಮಾ ಯಾವನೆ ಮೂಸಿ ನೋಡ್ತಾನೆ. ನಾವೇ ರಿಲೀಸ್‌ಗೆ ಟ್ರೈ ಮಾಡ್ಬೇಕಂದ್ರೆ ಪ್ರಿಂಟ್ ಅಂಡ್ ಪಬ್ಲಿಸಿಟಿಗೆ ಇಂತಹ ಸಿನಿಮಾಗಳಿಗೂ ಕನಿಷ್ಠ ನಾಲ್ಕು ಲಕ್ಷ ಬೇಕು' ನಿಟ್ಟುಸಿರಾದ. 'ಸಬ್ಜೆಕ್ಟ್ ಏನು?' ಕೇಳಿದೆ. 'ವಿಧವಾ ವಿವಾಹದ ಬಗ್ಗೆ ಹೇಳಿದ್ದೀನಿ ಕಣೆ' ಅಂದ. 'ನೀವು ಬೇರೆಯೋರಿಗೆ ಉಪದೇಶ ಮಾಡ್ತಿರಾ ಅಷ್ಟೆ. ನೀವು ಮಾತ್ರ...'

ಕೊಂಕುನೋಟ ಬೀರಿ ನಕ್ಕುಬಿಟ್ಟೆ. ಅವನಿಗೆ ಇರಿಟೇಟ್ ಮಾಡಿದೆನೇನೋ ತಟ್ಟನೆ ಮುಖ ಕಿವುಚಿಕೊಂಡ.



'ಈಗ್ಲೂ ನನ್ನನ್ನು ಪ್ರೀತಿಸ್ತಿದಿಯೇನೋ?' ಕೇಳಿದೆ. ಮುಖ ತಪ್ಪಿಸಿದನಾದರೂ 'ಹೌದು' ಎಂಬಂತೆ ತಲೆದೂಗಿದ.

'ನೋಡೋ, ನಾನು ಗಂಡ ಇದ್ದೂ ವಿಧವೆ ತರಹ ಅಲ್ವಾ? ನೀನೇಕೆ ನನ್ನನ್ನು ಮದುವೆ ಆಗಬಾರ್ದು?' ನಗುತ್ತಾ ಅವನ ಕಣ್ಣುಗಳಲ್ಲಿ ಕಣ್ಣಿಟ್ಟೆ.

'ನನಗೆ ಆ ಅದೃಷ್ಟವೂ ಇಲ್ಲ ಕಣೆ' ಅಂದ ಅವನು ನೆಲ ನೋಡುತ್ತಲೇ.

'ನನಗೀಗ